



# ಎಂಥ ಮರುಳಯ್ಯ ಇದು ಎಂಥಾ ಮರುಳು...

**ನೀಲಕುರಿಂಜಿಯ ಚೆಲುವಿಗೆ ಸಹೃದಯರಷ್ಟೇ ಅಲ್ಲ, ಕ್ರಿಮಿಕೀಟಗಳೂ ಮರುಳಾಗುತ್ತವೆ. ಕೀಟಲೋಕದೊಂದಿಗೆ ನೀಲಕುರಿಂಜಿ ಪುಷ್ಪಲೋಕದ ವಿಶಿಷ್ಟ ನುಡಿಚಿತ್ತಾರ.**

**■ ಕೆ.ಎಸ್‌. ಶ್ರೀನಿವಾಸ**







ವರ್ಷಗಳ ಹಿಂದೆ ಗೆಳೆಯರೊಬ್ಬರು ಕ್ಲಿಕ್ಕಿಸಿದ್ದ ‘ನೀಲಕುರಿಂಜಿ’ ಹೂಗಳು ತುಂಬಿದ ಬೆಟ್ಟದ ಸಾಲಿನ ಚಿತ್ರವೊಂದನ್ನು ನೋಡಿದೆ. ಇಡೀ ಬೆಟ್ಟಗಳೇ ನೀಲಿಮಿಶ್ರಿತ ನೇರಳೆ ಬಣ್ಣದಿಂದ ಕಂಗೊಳಿಸುತ್ತಿದ್ದವು. ಕುದುರೆಮುಖ ಪರ್ವತ ಶ್ರೇಣಿಗಳಲ್ಲಿ ಸೆರೆಹಿಡಿದಿದ್ದ ಆ ಫೋಟೊ ನನ್ನನ್ನು ಬಹುವಾಗಿ ಕಾಡಿದ ಚಿತ್ರಗಳಲ್ಲೊಂದು. ಅಲ್ಲಿನವರೇ ಆದ ಅವರಿಗೆ, ನೀಲಕುರಿಂಜಿ ಮತ್ತೆ ಅರಳಿದಾಗ ತಪ್ಪದೇ ತಿಳಿಸಬೇಕೆಂದು ಹೇಳಿದೆ. ಆಗಲೇ ತಿಳಿದದ್ದು ನೀಲಕುರಿಂಜಿ 12 ವರ್ಷಕ್ಕೊಮ್ಮೆ ಮಾತ್ರ ಅರಳುವ ವಿಷಯ. ಕುತೂಹಲ ಮತ್ತಷ್ಟು ಹೆಚ್ಚಾಯಿತು. ಪ್ರತೀಬಾರಿ ಅವರು ಊರಿಗೆ ಹೋಗಿ ಬಂದಾಗಲೂ ನೀಲಕುರಿಂಜಿ ಬಗ್ಗೆ ವಿಚಾರಿಸುತ್ತಿದ್ದೆ. ‘ಅರಳಿಲ್ಲ’ ಅನ್ನೋ ಉತ್ತರವೇ ಸಿಗುತಿತ್ತು. ಆದರೂ ನೀಲಕುರಿಂಜಿಯ ಜಪ ಮಾತ್ರ ನಿಲ್ಲಲಿಲ್ಲ.

ಕೆಲವು ವರ್ಷಗಳ ಹಿಂದೆ ಕೇರಳದ ಮುನ್ನಾರಿನಲ್ಲಿ ಯಥೇಚ್ಛ ಅರಳಿದೆ ಅಂತ ಸುದ್ದಿ ಬಂತು. ನಾನು ಸಿದ್ಧನಾಗುವಷ್ಟರಲ್ಲಿ ಕೇರಳದಲ್ಲಿ ಭೀಕರ ಮಳೆಯ ಸುದ್ದಿ ಬಂತು. ಮುನ್ನಾರು ಭಾಗದಲ್ಲೇ ಗುಡ್ಡಗಳು ಕುಸಿದು ಬಯಲಾಗಿದ್ದವು. ರಸ್ತೆಗಳು ಬಂದ್ ಆದವು. ಆ ಬಾರಿಯೂ ನೀಲಕುರಿಂಜಿ ನೋಡುವ ಕನಸು ಈಡೇರಲಿಲ್ಲ.

ಎರಡು ವರ್ಷಗಳ ಹಿಂದೆ ಮೂಡಿಗೆರೆ ಬಳಿಯ ದೇವರುಮನೆ ಬೆಟ್ಟಗಳಲ್ಲಿ ನೀಲಕುರಿಂಜಿ ಅರಳಿದೆ ಎಂಬ ಸುದ್ದಿ ಬಂತು. ತಡಮಾಡದೆ ಅಂದು ರಾತ್ರಿಯೇ ಕಾರು ಹತ್ತಿ ಬೆಳಗಿನ ಜಾವ 5 ಗಂಟೆಗೆ ದೇವರಮನೆ ತಲುಪಿದೆವು. ಡಿಸೆಂಬರ್ ಚಳಿ ಮೂಳೆಯನ್ನು ಕೊರೆಯುತಿತ್ತು. ಸೂರ್ಯ ಉದಯಿಸಲು ಇನ್ನೂ ಒಂದೂವರೆ ಗಂಟೆ ಬೇಕಿತ್ತು. ಆ ಚಳಿಯಲ್ಲಿ ಕಾದು ಕುಳಿತೆವು. ಆರೂವರೆ ಸುಮಾರಿಗೆ ಸೂರ್ಯ ಮಂಜಿನ ಹೊದಿಕೆಯನ್ನು ಕೊಡವಿ ನಿಧಾನವಾಗಿ ಕಾಣಿಸಿಕೊಂಡ. ಬೆಟ್ಟವೆಲ್ಲ ಹಸಿರಾಗಿಯೇ ಇದೆ. ಕಣ್ಣು ಹಾಯಿಸಿದಷ್ಟೂ ಹಸಿರೇ, ಎಲ್ಲೂ ನೀಲಕುರಂಜಿ ಹೂಗಳು ಕಾಣಲಿಲ್ಲ. ಬೆಟ್ಟವನ್ನೆಲ್ಲ ಹುಡುಕಿದಾಗ ಒಂದಷ್ಟು ಗಿಡಗಳನ್ನು ಮಾತ್ರ ನೋಡಿದೆವು. ಒಂದು ಹೂ ಸಹ ಕಾಣಲಿಲ್ಲ. ನಿರಾಸೆಯಿಂದ ಬೆಂಗಳೂರಿಗೆ ಹಿಂದಿರುಗಿದೆವು.

ಕಳೆದ ವರ್ಷ ಕೊಡಗಿನಲ್ಲಿ ಸ್ವಲ್ಪ ಪ್ರಮಾಣದಲ್ಲಿ ಅರಳಿದ್ದವು. ಕೊರೊನಾ ನಿರ್ಬಂಧ ಮತ್ತು ಮಳೆಯಿಂದಾಗಿ ಅಲ್ಲಿಗೂ ಹೋಗಲಾಗಲಿಲ್ಲ.